(ಆ) ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರು ಯಾವ ಕ್ರಮ ತೆಗೆದುಕೊಂಡಿದ್ದಾರೆ ?

(ಇ) ಸದರಿ ಕಟ್ಟಡ ಬಾಡಿಗೆ ಕೊಟ್ಟ ನಿಯಮಗಳಿಗೆ ವಿರುದ್ಧವಾಗಿ ಆಡಳಿತ ಮಂಡಲಿ ವರ್ತಿಸಿದ್ದರ ಬಗ್ಗೆ ನಗರಸಭೆ, ಬಿಲ್ಡಿಂಗ್ ಲಾಭಕ್ಕೆ ತೆಗೆದುಕೊಳ್ಳಲಿಕ್ಕೆ ಯಾವ ಕ್ರಮ ತೆಗೆದುಕೊಂಡಿದ್ದಾರೆ, ಹಾಗೂ ಇದುವರೆಗೂ ಕಬಜಾ ಪಡೆದುಕೊಂಡಿರುವುದಿಲ್ಲದಿರಲು ಕಾರಣಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು).—

(ಆ) ಕಟ್ಟಡವನ್ನು ಸಬ್ ಲೀಸ್ ಮಾಡಿರುವ ವಿಷಯ ಪುರಸಭೆಯ ಗಮನಕ್ಕೆ ಬಂದಿದೆ.

(ಆ) ರಾಣಿಬೆನ್ನೂರು ಪುರಸಭೆಯು ಕೋರ್ಟಿನಲ್ಲಿ ಖುಲ್ಲಾ ಮಾಡಿಸಲು ದಾವೆ ಹೂಡಿದೆ.

(ಇ) ಕೋರ್ಟಿನಲ್ಲಿ ಸ್ವಾಧೀನ ಪಡೆಯಲು ಹೂಡಿದ ದಾವೆ ಇನ್ನೂ ನಡೆಯುತ್ತಿರುವುದರಿಂದ ಕಬಜಾ ತೆಗೆದುಕೊಳ್ಳಲು ಆಗಿಲ್ಲ.

ಶಿರಾ ನಗರದಲ್ಲಿ ಕೊಳಚೆ ನಿರ್ಮೂಲನ ಮಾಡುವ ಬಗ್ಗೆ

೨೬೮ (೧೦೨) ಶ್ರೀ ಸಿ. ಮೂಡ್ಲೇಗೌಡ (ಶಿರಾ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಶಿರಾ ನಗರದಲ್ಲಿ ಕೊಳಚೆ ನಿರ್ಮೂಲನ ವಿಚಾರದಲ್ಲಿ ಸರ್ಕಾರದವರು ಯಾವ ಕಾರ್ಯ ಕ್ರಮಗಳನ್ನು ಕೈಗೊಂಡಿದ್ದಾರೆ ?

ಆ) ತೀರ ಇಕ್ಕಟ್ಟಾದ ಕೊಳಚೆ ಪ್ರದೇಶಗಳಲ್ಲಿನ ನಾಗರೀಕರಿಗೆ ಬೇರೆ ಕಡೆ ವಸತಿ ಗೃಹಗಳ ನಿರ್ಮಾಣ ಮಾಡಲು ಸರ್ಕಾರದವರು ಯೋಚಿಸಿದ್ದಾರೆಯೇ ? ಈ ಬಗ್ಗೆ ಸರ್ಕಾರದವರು ಯಾವ ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಪ್ರಾಧಿಕಾರದ ಮಂತ್ರಿ ಗಳು).—

ಅ) ಶಿರಾ ಪುರಸಭೆಯ ಪರಿಮಿತಿಯಲ್ಲಿ ೫ ಕೊಳಚೆ ಪ್ರದೇಶಗಳನ್ನು ಇತ್ತೀಚೆಗೆ ಗುರುತಿಸ ಲಾಗಿದೆ. ಇವುಗಳನ್ನು ಕೊಳಚೆ ಪ್ರದೇಶವೆಂದು ಘೋಷಿಸುವ ವಿಚಾರವು ಪರಿಶೀಲನೆಯಲ್ಲಿದೆ. ಇವುಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸಿದಲ್ಲಿ ಈ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಈ ಬಗ್ಗೆ ಶಿರಾ ಪುರಸಭೆಗೆ ಖಾಲಿ ಜಮೀನು ನೀಡುವಂತೆ ಕೋರಲಾಗಿದೆ. ಪುರಸಭೆಯು ಸೂಕ್ತವಾದ ಖಾಲಿ ಜಮೀನನ್ನು ನೀಡಿದಲ್ಲಿ ವಸತಿ ಗೃಹಗಳನ್ನು ಕಟ್ಟುವುದರ ಬಗ್ಗೆ ಪರಿಶೀಲಿಸಲಾಗು ವುದು.

ಮೈಸೂರು ಜಿಲ್ಲಾ ದೇವಲಾಪುರ ಗ್ರಾಮದ ಸರ್ವೆ ನಂ. ೪೨ರಲ್ಲಿ ದಲಿತ ಕೃಷಿ ಕಾರ್ಮಿಕರು ಬೇಸಾಯ ಮಾಡಿದ ಬೆಳೆಯು ನಾಶದ ಬಗ್ಗೆ

೨೬೯ (೨೮೯) ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ) ಮತ್ತು ಶ್ರೀ ಗೊವಿಂದ ಪಿ. ಒಡೆಯ ರಾಜ್ (ಕಮಲಾಪುರ).—ಕಂದಾಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:—

ಅ) ಮೈಸೂರು ಜಿಲ್ಲಾ ಹೆಗ್ಗಡದೇವನಕೋಟೆ ತಾಲ್ಲೂಕಿನ ನಂದಳಿಕೆ ಹೋಬಳಿ ದೇವಲಾಪುರ ಗ್ರಾಮದ ವ್ಯಾಪ್ತಿಗೆ ಸೇರಿದ ಸರ್ವೆ ನಂಬರ್ ೪೨ರಲ್ಲಿ ದೇವಲಾಪುರ ಮತ್ತು ಇನ್ನುಳಿದ ೮ ಹಳ್ಳಿ ಗಳ ಎಲ್ಲಾ ಜಾತಿಯ ಭೂ ಹೀನ ದಲಿತರು ಸಾಗುವಳಿ ಮಾಡುತ್ತಿದ್ದುದು ನಿಜವೆ, ಅಲ್ಲದೆ ಸದರೀ ಸರ್ವೆ ನಂಬರಿನಲ್ಲಿ ೧೦–೨೦ ಎಕರೆ ಜಮೀನುಳ್ಳ ರೈತರು ಕೂಡ ಭೂಮಿಯನ್ನು ಆಕ್ರಮಿಸಿ ಬೇಸಾಯ ಮಾಡುತ್ತಿರುವುದು ನಿಜವೇ?

ಅ) ಈ ವರ್ಷ ಮಾರ್ಚ್ ತಿಂಗಳಿಂದ ಕೃಷಿ ಕೂಲಿಗಾರರು ಸದರೀ ಸರ್ವೆ ನಂಬರಿನಲ್ಲಿ ಕುರುಚಲು ಕಾಡು ಹಸನು ಮಾಡಿ ಬಿತ್ತಿದ್ದು ನಿಜವೇ, ಹಾಗೂ ಬೆಳೆ ಕೈಗೆ ದಕ್ಕಬೇಕು ಎನ್ನುವಷ್ಟರಲ್ಲಿ ದಿನಾಂಕ ೩-೮-೧೯೮೩ರಂದು ೯ ವಾ.ನುಗಳ ತುಂಬಿ ಪೋಲೀಸರನ್ನೂ ದೇವಲಾಪುರದ ಸುತ್ತ ಹತ್ತು ಮೈಲು ದೂರಕ್ಕೆ ನಿಷೇಧಾಜ್ಞೆ ಘೋಷಿಸಿ ದಲಿತ ಕೃಷಿ ಕೂಲಿಗಾರರು ಬೆಳೆದ ಬೆಳೆ ನಾಶಪಡಿಸಿಯೂಕ್ಲಪ್ಟಸ್ ಗಿಡಗಳನ್ನು ನಡೆಸಿದ್ದು ನಿಜವೆ.

ಇ) ನಂತರ ಕೂಲಿ ಮಾಡುವ ದಲಿತರನ್ನು ನಿತ್ಯ ಬಂಧಿಸಿ ತಂದು ಮೈಸೂರು ಜೈಲಿನಲ್ಲಿ ತುಂಬುತ್ತಿರುವುದು ನಿಜವೆ. ಅಲ್ಲದೇ ನೂರಾರು ಮಂದಿ ಕೂಲಿ ಮಾಡುವ ದಲಿತರ ಕುಟುಂಬಗಳ ಹೊಟ್ಟೆಗೆ ಅನ್ನವಿಲ್ಲದೇ ಕಂಗಾಲಾಗಿ ಪೋಲೀಸ್ ದಬ್ಬಾಳಿಕೆಯಿಂದ ದಿಕ್ಕೆಟ್ಟು ಊರು ಬಿಟ್ಟಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಗದಗ ತಾಲ್ಲೂಕ ಬೆನಕನಕೊಪ್ಪ ಗ್ರಾಮವನ್ನು ಸ್ಥಳಾಂತರಿಸುವುದು

೨೭೦ (೧೩೩) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ನಗರಾಭಿವೃದ್ಧಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

ಅ) ಎರಡು ದೊಡ್ಡ ಹಳ್ಳಿಗಳ ನಡುವೆ ಇರುವ ಗದಗ ತಾಲ್ಲೂಕು ಬೆನಕನಕೊಪ್ಪ ಗ್ರಾಮವನ್ನ ಸ್ಥಳಾಂತರಿಸುವ ಕುರಿತು ಸರ್ಕಾರದವರು ಕೈಕೊಂಡ ಕ್ರಮಗಳೇನು ?

ಆ) ಪುನರ್‌ವಸತಿಯ ಸಲುವಾಗಿ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಇಪ್ಪತ್ತು ಎಕರೆ ಜಮೀನನ್ನು ಖರೀದಿಸಿದ್ದು ನಿಜವೇ ?

ಇ) ಹಾಗಿದ್ದಲ್ಲಿ ಮನೆಯ ನಿವೇಶನಗಳ ನೀಲ ನಕ್ಷೆ ತಯಾರಿಸಿದೆಯೇ ?

ಈ) ನಕ್ಷೆ ತಯಾರಿಸಿದ್ದಲ್ಲಿ ನಿವೇಶನಗಳನ್ನು ಹಂಚಿ, ಸದರಿ ಗ್ರಾಮಸ್ಥರಿಗೆ ಮನೆಗಳನ್ನು ಕಟ್ಟಿ ಕೊಡಲು ದೀರ್ಘ ವಿಳಂಬಕ್ಕೆ ಕಾರಣಗಳೇನು ?

ಉ) ಬೆನಕೊಪ್ಪದ ಪುನರ್‌ವಸತಿಯ ನಿರ್ಮಾಣ ಇನ್ನೂ ಎಷ್ಟು ವರ್ಷದಲ್ಲಿ ಪೂರ್ಣವಾಗುವುದು ?

TEMPLE PROPERTY IN KODAGU DIST

271 (213) SRI M.M. NANAIAH (Madikeri).—Will the Minister for Revenue be pleased to state:—

a) whether there is any landed property to the Muzrai Temples in Kodagu District?

b) if so, which are they?

c) the extent of property?

d) whether there is any landed property lost by the temple due to land Reforms in Kodagu District;

e) if so, whether the compensation has been paid by the Government?

SRI V. L. PATIL (Minister for Revenue).—

a) Yes.

b) Bhagamandala, Talacauvery, Prloor, Irpu, Omkareshwara Madikeri Temple lands.